ಇ) ಹೌದು

ಈ) ಈ ಆದೇಶಗಳು ದಿನಾಂಕ 1 4 2007 ರಿಂದ ಜಾರಿಯಲ್ಲಿದೆ

832 (1200) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಭಾಲ್ಕಿ ತಾಲ್ಲೂಕಿನಲ್ಲಿ ದಿನಾಂಕ 22 06 2007 ರಂದು ಭಾರಿ ಮಳೆಯಿಂದ ಮನೆಗಳು ನೀರಿನಲ್ಲಿ ಮುಳುಗಡೆಯಾಗಿ ಬಡ ಜನರ ಜೀವನ ಅಸ್ತವ್ಯಸ್ತಗೊಂಡು ಬಹಳಷ್ಟು ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಾದರೆ ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ,

ಇ) ಈ ಬಡ ಜನರ ಮನೆಗಳು ಹಾಗೂ ಇವರ ಜೀವನ ಸುಧಾರಣೆಗೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು,

ಈ) ಹಾಗಿದ್ದಲ್ಲಿ ಇವರು ಸುಧಾರಣೆಗೆ ಯಾವಾಗ ಕ್ರಮ ಕೈಗೊಳ್ಳುವಿರಿ ಎಂಬುದನ್ನು ಸ್ಪಷ್ಟ ನಿರ್ದೇಶನದೊಡನೆ ತಿಳಿಸುವುದೇ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ದಿನಾಂಕ 22 6 2007 ರಂದು ಭಾಲ್ಕಿ ಪಟ್ಟಣದಲ್ಲಿ ಬಿದ್ದ ಭಾರಿ ಮಳೆಯಿಂದ ಬೀದರ್ ಬೇಸ್ ಬಡಾವಣೆ ಹಾಗೂ ದೇವಿ ಕಾಲೋನಿ ಹತ್ತಿರ ನಾಲಾ ನೀರು(ಚರಂಡಿ) ಕೇವಲ 22 ಸಾರ್ವಜನಿಕರ ಮನೆಗಳಲ್ಲಿ ನುಗ್ಗಿ ಮನೆಯಲ್ಲಿರುವ ನಿತ್ಯೋಪಯೋಗಿ ವಸ್ತುಗಳಿಗೆ ಮಾತ್ರ ಹಾನಿಯಾಗಿರುತ್ತದೆ ಈ ಪೈಕಿ 3 ಮನೆಗಳು ಮಾತ್ರ ಭಾಗಶಃ ಬಿದ್ದಿರುತ್ತವೆ

ಆ) ಮನೆಗಳ ಹಾನಿಗಳ ಬಗ್ಗೆ ತಹಶೀಲ್ದಾರ್ ಸಮೀಕ್ಷೆ ನಡೆಸುತ್ತಿದ್ದು, ವರದಿ ಬಂದ ತಕ್ಷಣ ಪರಿಹಾರ ನೀಡಲಾಗುವುದು ತುರ್ತು ಪರಿಹಾರ ನೀಡಲು ಮತ್ತು ಪರಿಹಾರ ಕಾರ್ಯ ಕೈಗೊಳ್ಳಲು ಬೀದರ್ ಜಿಲ್ಲೆಗೆ ಸರ್ಕಾರದಿಂದ ರೂ 50 00 ಲಕ್ಷ ಬಿಡುಗಡೆ ಮಾಡಲಾಗಿದೆ

ಇ) ಕೇಂದ್ರ ಸರ್ಕಾರ ನಿಗದಿಪಡಿಸಿದ ಪ್ರಕೃತಿ ವಿಕೋಪ ಮಾರ್ಗಸೂಚಿಗಳಂತೆ ಮನೆಹಾನಿಗೆ ಪರಿಹಾರ ನೀಡಲಾಗುವುದು

ಈ) ಪರಿಹಾರ ಧನ ವಿತರಿಸಲಾಗುವುದು

834 (1189) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ರಾಜ್ಯ ಸರ್ಕಾರಿ ಸ್ವಾಮ್ಯದ ಕೈಗಾರಿಕೆಗಳು ಯಾವುವು,

ಆ) ಈ ಕಾರ್ಖಾನೆಗಳಲ್ಲಿನ ಉತ್ಪನ್ನಗಳ ವಿವರ ನೀಡುವುದು,

ಇ) ಈ ಕಾರ್ಖಾನೆಗಳ ಕಳೆದ ಮೂರು ವರ್ಷಗಳಲ್ಲಿನ ಲಾಭ–ನಷ್ಟಗಳ ವಿವರ ನೀಡುವುದು,